ಶ್ರೀ ಎಸ್ ಎ ರವೀಂದ್ರನಾಥ್ ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆಯಲ್ಲಿ 2ನೇ ಬ್ಲಾಕ್‌ನಲ್ಲಿ 17 ಗ್ರಾಮ ಪಂಚಾಯತಿಗಳಲ್ಲಿ 70 ನೀರು ಸರಬರಾಜು ಮತ್ತು 64 ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಮುಗಿಸಿದ್ದೇವೆ ಅದರ ಜೊತೆಗೆ ಬೇರೆ ರಾಜ್ಯಗಳಲ್ಲಿ ಸಹ ಹಣ ಪಡೆದಿರುವವರು 2 ವರ್ಷ ಮುಂದೂಡಿದ್ದಾರೆ ನಮಗೂ ಸಹ ಈಗ ಡಿಸೆಂಬರ್ 2007ಕ್ಕೆ ಮುಗಿಯುತ್ತದೆ ಇನ್ನೂ ಒಂದು ವರ್ಷ ಮುಂದಕ್ಕೆ ಮಾಡಿಕೊಟ್ಟರೆ ಅಷ್ಟರೊಳಗೆ ಹಣ ಪೂರ್ತಿ ಖರ್ಚು ಮಾಡುವುದರೊಂದಿಗೆ ಕೆಲಸ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ

(ಗೊಂದಲ)

ಅಧ್ಯಕ್ಷರು ಈಗ ಪ್ರತಿಯೊಂದು ಪ್ರಶ್ನೋತ್ತರಕ್ಕೂ 10 ನಿಮಿಷದಷ್ಟು ಸಮಯ ಕೊಡುವುದಕ್ಕಾಗುವುದಿಲ್ಲ

(ಗೊಂದಲ)

ಶ್ರೀ ಎಸ್ ಭೋಸರಾಜು ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಚರ್ಚೆಯನ್ನು close ಮಾಡಿದ್ದೇನೆ ತಾವೆಲ್ಲ ಕುಳಿತುಕೊಳ್ಳಬೇಕು ಹೀಗೆಲ್ಲ ಮಾಡಿದರೆ ಆಗುವುದಿಲ್ಲ ಏಕೆಂದರೆ ಹೆಚ್ಚಿಗೆ ಸಮಯ ಇಲ್ಲ ಇನ್ನೂ ಬಹಳಷ್ಟು ಪ್ರಶ್ನೆಗಳು ಬಾಕಿ ಇವೆ ಈಗ ಮುಂದಿನ ಪ್ರಶ್ನೆ

ಹನಿನೀರಾವರಿ ಯೋಜನೆಗಾಗಿ ಅನುದಾನ ಬಿಡುಗಡೆ

55(244) ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹನಿ ನೀರಾವರಿ ಯೋಜನೆಗೆ ಆಯವ್ಯಯದ ಘೋಷಣೆಯಂತೆ ಶೇಕಡಾ 75 ರಷ್ಟು ರಿಯಾಯಿತಿ ನೀಡುವುದು ಜಾರಿಯಾಗಿದೆಯೇ ,

ಆ) ಜಾರಿಯಾಗಿದ್ದಲ್ಲಿ, ಇದರ ಉಪಯೋಗ ಪಡೆದಿರುವ ರೈತರ ಸಂಖ್ಯೆ ಎಷ್ಟು ,

ಇ) ಈ ಯೋಜನೆಗೆ ಬಿಡುಗಡೆಗೊಳಿಸಿರುವ ಅನುದಾನವೆಷ್ಟು ,

ಈ) ಚಾಮರಾಜನಗರ ಜಿಲ್ಲೆಯಲ್ಲಿ ಈ ಯೋಜನೆಯ ಪ್ರಯೋಜನ ಪಡೆದ ರೈತರೆಷ್ಟು ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ರಾಜ್ಯದ ಆಯವ್ಯಯದಲ್ಲಿ ಮಾಡಲಾದ ಘೋಷಣೆಯನ್ವಯ ತೋಟಗಾರಿಕೆ ಬೆಳೆಗಳಿಗೆ ಮಾತ್ರ ಹನಿ ನೀರಾವರಿ ಅಳವಡಿಸಲು ಶೇ 75 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ ಆದರೆ, ಕೃಷಿ ಬೆಳೆಗಳಿಗೆ ಶೇ 50 ರಷ್ಟು ರಿಯಾಯಿತಿ ಸೌಲಭ್ಯ ನೀಡಲಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಇ) ಹನಿ ನೀರಾವರಿ ಯೋಜನೆಯ ಅನುಷ್ಠಾನಕ್ಕೆ ಕೃಷಿ ಇಲಾಖೆಯ ಜಿಲ್ಲಾ ವಲಯದ ಆಯವ್ಯಯದಲ್ಲಿ 586 55 ಲಕ್ಷ ರೂ ಗಳನ್ನು ಮೀಸಲಿಡಲಾಗಿದೆ

ಈ) ಚಾಮರಾಜನಗರ ಜಿಲ್ಲೆಯ 42 ರೈತರು ಈ ಯೋಜನೆಯ ಲಾಭಪಡೆದಿದ್ದು, ಇದಕ್ಕಾಗಿ ಜಿಲ್ಲೆಗೆ 6 50 ಲಕ್ಷ ರೂಗಳಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಅಧ್ಯಕ್ಷರೆ, ಹನಿ ನೀರಾವರಿ ಕೇವಲ ತೋಟಗಾರಿಕೆಗೆ ಮಾತ್ರ 75% ಸಹಾಯಧನ ನೀಡಲಾಗುತ್ತದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ ಆದರೆ, ಮಾನ್ಯ ಯಡಿಯೂರಪ್ಪ ಸಾಹೇಬರು page no 14 Budget ಪುಸ್ತಕದಲ್ಲಿ " Subsidy upto 75% for drip irrigation and extension of the facilities throughout the state" ಎನ್ನತಕ್ಕಂಥದ್ದನ್ನು ಹೇಳಿದ್ದಾರೆ ಅದು ತೋಟಗಾರಿಕೆಗೆ ಮಾತ್ರ ಸೀಮಿತವಾಗಿದೆ ಎಂದು ಹೇಳಲಿಲ್ಲ ಕೃಷಿಗೂ ಕೂಡ ಎಂದು ಭಾವಿಸಿಕೊಂಡು 75% ತೋಟಗಾರಿಕೆ ಮತ್ತು ಕೃಷಿಗೆ ಕೂಡ ಕೊಡತಕ್ಕಂಥದ್ದು ಆಗಬೇಕು ಕೇವಲ ತೋಟಗಾರಿಕೆಗೆ ಎಂದು ಮಾನ್ಯ ಕೃಷಿ ಮಂತ್ರಿಗಳು ಉತ್ತರದಲ್ಲಿ ತಿಳಿಸಿದ್ದಾರೆ ಕುಡಿಯುವ ನೀರಿಗೇ ಬಹಳ ಕಷ್ಟ ಆಗಿರುವ ಈ ಸಂದರ್ಭದಲ್ಲಿ, ಕೃಷಿಗೆ ಬಹಳಷ್ಟು ಪ್ರಾಧಾನ್ಯ ಕೊಡತಕ್ಕಂಥ ಸಂದರ್ಭದಲ್ಲಿ, ಕೇವಲ ತೋಟಗಾರಿಕೆಗೆ ಮಾತ್ರ 75% drip irrigation ಎಂದು budget ನಲ್ಲಿ mention ಮಾಡಿಲ್ಲ Budget ನಲ್ಲಿ 75% ಕೃಷಿಗೆ ಮತ್ತು ಎಲ್ಲದಕ್ಕೂ ಕೂಡ ಎನ್ನತಕ್ಕಂಥದು ಇದೆ, ಬರೀ ತೋಟಗಾರಿಕೆಗೆ ಮಾತ್ರ ಎಂದು ಇಲ್ಲ 75% drip irrigation ಎಂದಾಗ ಅವತ್ತು ಎಲ್ಲರೂ bench ತಟ್ಟಿದರು ಈಗ ಕೇವಲ ತೋಟಗಾರಿಕೆಗೆ ಮಾತ್ರ ಮೀಸಲು ಎಂದು ತಾವು ಹೇಳಿದ್ದೀರಿ ಕೃಷಿ ಬಹಳ ಪ್ರಧಾನವಾಗಿರತಕ್ಕಂಥದ್ದು ಇದೆ 75% drip irrigation

ಅನ್ನೂ ಕೃಷಿಗೂ ಕೂಡ ಅಳವಡಿಸಬೇಕು ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ, ಇದು ತೋಟಗಾರಿಕೆಗೆ ಮಾತ್ರವಲ್ಲ, ಕೃಷಿಗೂ ಕೂಡ ಅನ್ನತಕ್ಕಂಥದ್ದನ್ನು ದಯಮಾಡಿ ಹೇಳಬೇಕೆಂದು ಅಧ್ಯಕ್ಷರ ಮುಖೇನ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ(ಉಪ ಮುಖ್ಯಮಂತ್ರಿ) ತೋಟಗಾರಿಕೆಗೇನು 75% subsidy ಕೊಡುತ್ತಿದ್ದೇವೆ, ಅದು ಕೃಷಿಕರಿಗೂ, ಇತರೆ ಕೆಲಸಕಾರ್ಯಗಳಿಗೂ ಉಪಯೋಗವಾಗ ಬೇಕುಎನ್ನುವಂಥದ್ದು ಈ ಮನೆಯ ಎಲ್ಲ ಸದಸ್ಯರ ಒಟ್ಟಾರೆ ಅಭಿಪ್ರಾಯ ಆದ್ದರಿಂದ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ತೋಟಗಾರಿಕೆ ಅಲ್ಲದೆ ಕೃಷಿ ಪ್ರಶ್ನೆ ಬಂದಾಗ ಯಾವುದಕ್ಕೂ ಈ ಸಮ್ಮಿಶ್ರ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ ಆದ್ಯತೆ ಕೃಷಿಗೇ ಇದೆ ತೋಟಗಾರಿಕೆ ಬಿಟ್ಟು ಉಳಿದಂಥ ಕೃಷಿಗೂ ಕೂಡ 75% subsidy ಕೊಡುವ ಬಗ್ಗೆ ತತ್‌ಕ್ಷಣ ನಿರ್ಧಾರ ತೆಗೆದುಕೊಂಡು ಆ ಸವಲತ್ತನ್ನು ಎಲ್ಲರಿಗೂ ವಿಸ್ತರಣೆ ಮಾಡುವಂಥ ತೀರ್ಮಾನವನ್ನು ನಾನು ತೆಗೆದುಕೊಳ್ಳುವವನಿದ್ದೇನೆ ಈ ಕಾರ್ಯಕ್ಕಾಗಿ ಅಭಿನಂದನೆ ತಿಳಿಸಿ

ಶ್ರೀ ಆರ್ ಧ್ರುವ ನಾರಾಯಣ ತೋಟಗಾರಿಕೆ ಬೆಳೆ ಹೇಗೆ ಇದೆಯೋ ಹಾಗೆ ಕೃಷಿ ಇಲಾಖೆಗೆ ಸಂಬಂಧಪಟ್ಟಂಥ ಎಲ್ಲ ಕೃಷಿ ಬೆಳೆಗಳಿಗೂ ಕೂಡ 75% drip irrigation ಅಳವಡಿಸುತ್ತೇವೆ ಎಂದು ತಾವು ಘೋಷಣೆ ಮಾಡಬೇಕು Budget ನಲ್ಲಿ specific ಆಗಿ ಕೇವಲ ತೋಟಗಾರಿಕೆಗೆ ಎಂದು ಹೇಳಿಲ್ಲ 75% drip irrigation ಎಲ್ಲದಕ್ಕೂ ಎಂದು Budget ನಲ್ಲಿ ತಾವು ಹೇಳಿದ್ದೀರಿ

ಶ್ರೀ ಬಿ ಎಸ್ ಯಡಿಯೂರಪ್ಪ ನಾನು ಎಲ್ಲ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ, ಈ 75% subsidy ಯನ್ನು ಏನು ತೋಟಗಾರಿಕೆಗೆ ಕೊಡುತ್ತಿದ್ದೇವೆ, ಕೃಷಿಯ ಇತರೆ ಚಟುವಟಿಕೆಗೂ ಕೂಡ ಈ 75% subsidy ಯನ್ನು ವಿಸ್ತರಣೆ ಮಾಡುವುದಕ್ಕೆ ಆಜ್ಞೆ ಮಾಡುತ್ತೇವೆ ತೀರ್ಮಾನ ತೆಗೆದುಕೊಂಡು ಅನುಕೂಲ ಮಾಡಿಕೊಡುತ್ತೇವೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಈಗಾಗಲೇ budget ನಲ್ಲಿ ಎಲ್ಲದಕ್ಕೂ 75% subsidy ಎಂದು ಘೋಷಣೆ ಮಾಡಿದ್ದೀರಿ ಆದರೆ,

ಅದು ಅನುಷ್ಠಾನಕ್ಕೆ ಬಂದಿಲ್ಲ ಈಗ ನೀವು ಹೇಳುತ್ತಿದ್ದೀರಿ ಸಂತೋಷವಾಗುತ್ತಿದೆ ಧನ್ಯವಾದಗಳು ಆದರೆ, ನೀವು ಘೋಷಣೆ ಮಾಡಿದ್ದು ಇನ್ನೂ ಆಗಿಲ್ಲ ದಯವಿಟ್ಟು, immediately ಮಾಡಿ

ಶ್ರೀ ಎನ್ ಧರಂಸಿಂಗ್ ಸರಿಯಾಗಿ ಮಾಡತಕ್ಕಂಥ ರೀತಿಯಲ್ಲಿ ಕೇಂದ್ರ ಸರ್ಕಾರದಿಂದ ತೋಟಗಾರಿಕಾ ಇಲಾಖೆಗೆ ಎಷ್ಟು ಹಣ ಬಂದಿದೆ? ಎಷ್ಟು ಹಣ ಖರ್ಚಾಗಿದೆ? ನನ್ನ ತಿಳುವಳಿಕೆ ಪ್ರಕಾರ, 113 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಬಿಡುಗಡೆ ಮಾಡುವುದರಲ್ಲಿ ಕೂಡ ಇನ್ನೂ 40 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಮಾಡಿದ್ದಾರೆ For that, ಇವತ್ತು ನಿಮ್ಮ department, ತೋಟಗಾರಿಕೆ ಇಲಾಖೆ action plan prepare ಮಾಡಬೇಕು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಬೇಕು ತೋಟಗಾರಿಕೆ ಇಲಾಖೆಯಲ್ಲಿ ಇವತ್ತು ಬಿಜಾಪುರ, ಬೇರೆ ಕಡೆಗಳಲ್ಲಿ ಕೂಡ ಅದಕ್ಕೆ ಹೆಚ್ಚಿನ ಉತ್ತೇಜನ ಕೊಡುವ ರೀತಿಯಲ್ಲಿ ಇವತ್ತೇನು ಕಾರ್ಯಕ್ರಮ ರೂಪಿಸಿದ್ದೀರಿ? ರಾಜ್ಯ ಸರ್ಕಾರದಿಂದ ಹಣ ಕೊಡತಕ್ಕಂಥದ್ದು ಬೇರೆ ವಿಚಾರ ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಎಷ್ಟರ ಮಟ್ಟಿಗೆ ರಾಜ್ಯ ಸರ್ಕಾರ ಉಪಯೋಗ ಮಾಡಿದೆ? ಅಧಿಕಾರಿಗಳು ಅದಕ್ಕೆ ಹೆಚ್ಚಿನ ಕಾರ್ಯ ತತ್ಪರರಾಗಿದ್ದಾರೆಯೇ?

ಅಧ್ಯಕ್ಷರು ಉತ್ತರ ಹೇಳಲಿ

ಶ್ರೀ ಬಂಡೆಪ್ಪ ಕಾಶೆಂಪೂರ್ ಅವರು ಆಮೇಲೆ ಹೇಳುತ್ತಾರೆ ಮೊದಲು ನನ್ನ ಉತ್ತರ ಮುಗಿಸುತ್ತೇನೆ ನನ್ನ ಖಾತೆಗೆ ಸಂಬಂಧಪಟ್ಟಂತೆ ವಿರೋಧ ಪಕ್ಷದ ನಾಯಕರು ಪ್ರಶ್ನೆ ಕೇಳಿದ್ದಾರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಅವರು ಉತ್ತರ ಹೇಳುತ್ತಾರೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ತೋಟಗಾರಿಕಾ ಸಚಿವರು ಉತ್ತರ ಹೇಳಬೇಕಲ್ಲ

ಶ್ರೀ ಬಂಡೆಪ್ಪ ಕಾಶೆಂಪೂರ್ ನನ್ನ ಉತ್ತರ ಮುಗಿದ ಮೇಲೆ ಅವರು ಹೇಳುತ್ತಾರೆ ಮಾನ್ಯ ಸದಸ್ಯರು ಕೃಷಿ ಇಲಾಖೆಗೆ 75% subsidy ಕೊಟ್ಟಿಲ್ಲವೆಂದು ಹೇಳಿದರು ಆದರೆ, ನಾನು Deputy C M ರವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಈಗ ತಕ್ಷಣ ಅವರು ಕ್ರಮ ತೆಗೆದುಕೊಂಡಿದ್ದಾರೆ ಆದರೆ, ತಮಗೆ ಹೇಳಬೇಕಾದರೆ, ತಾವು budget highlights ಹೇಳುತ್ತಿದ್ದೀರಿ ವಿಶೇಷವಾಗಿ, agriculture and horticulture ಬಗ್ಗೆ

ನೋಡಿದರೆ agriculture ನಲ್ಲಿ ಹೇಳಿಲ್ಲ Horticulture ನಲ್ಲಿ ಹೇಳಿದ್ದಾರೆ ಆದರೂ, ನಮ್ಮ ಇಲಾಖೆಯಿಂದ ನಮಗೂ 75% ಬೇಕೆಂಬ ನಿಟ್ಟಿನಲ್ಲಿ already ಉಪ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ ಅದರ ಪರಿಶೀಲನೆಯನ್ನು ಅವರು ಮಾಡುತ್ತಿದ್ದಾರೆ ಆದರೆ, ತಮ್ಮ ಉತ್ತರದಲ್ಲಿ ಅವರು ಇವತ್ತು ಸದನದಲ್ಲಿ ಒಪ್ಪಿಕೊಂಡು ಮಾಡುತ್ತೇವೆಂದು ಹೇಳಿದ್ದಾರೆ ಅದು ಬಹಳ ಸಂತೋಷ ಇಡೀ ರಾಜ್ಯದ ರೈತರ ಪರವಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ನಮ್ಮ ರಾಜ್ಯ ಸರ್ಕಾರದ್ದು 86 ಲಕ್ಷ ರೂಪಾಯಿಗಳನ್ನು ನಾವು ನೀರಾವರಿಗೆ ಕೊಟ್ಟಿದ್ದೇವೆ ಆದರೆ, ಕೇಂದ್ರ ಸರ್ಕಾರದಿಂದ ವಿಶೇಷವಾಗಿ ಈ ಯೋಜನೆಯಡಿಯಲ್ಲಿ ನಮಗೆ ಇನ್ನೂ ಹೆಚ್ಚಿನ ಹಣ ಬಂದಿದೆ Already 16 ಕೋಟಿ ರೂಪಾಯಿಗಳ DD ಬಂದಿದೆ 6 ಜಿಲ್ಲೆಗಳಿಗೆ 8 ಕೋಟಿ ರೂಪಾಯಿಗಳು ಬಂದಿದೆ ಸುಮಾರು 24 ಕೋಟಿ 56 ಲಕ್ಷ ರೂಪಾಯಿಗಳು ಬಂದಿದೆ ಇವತ್ತು ಉಪ ಮುಖ್ಯಮಂತ್ರಿಗಳೇನು ಒಪ್ಪಿಕೊಂಡಿದ್ದಾರೆ, ಇದು ನಮಗೆ ಬಹಳ ಪ್ರೋತ್ಸಾಹದಾಯಕವಾಗಿದೆ State share 21 ಕೋಟಿ 49 ಲಕ್ಷ ರೂಪಾಯಿ ಏನಿದೆ, ಈಗ ಹೆಚ್ಚಿಗೆ ಹಣ ಕೊಡಬೇಕಾಗುತ್ತದೆ ಅದಕ್ಕೆ ಬರುವ ದಿನಗಳಲ್ಲಿ ಇಡೀ ರಾಜ್ಯದ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ ಆ ನಿಟ್ಟಿನಲ್ಲಿ ಮತ್ತೊಂದು ಸಲ ನಾನು ಉಪ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ

ಬಾಕಿ ಬಿಲ್ಲು ಪಾವತಿಸುವುದು

56(428) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಚಾಮರಾಜನಗರ ಜಿಲ್ಲೆಗೆ ಟಾಸ್ಕ್‌ಫೋರ್ಸ್ ಸಮಿತಿ ಮುಖಾಂತರ ಅನುಷ್ಠಾನಗೊಳಿಸಿರುವ ತುರ್ತು ಕುಡಿಯುವ ನೀರು ಯೋಜನೆಗೆ ಅನುದಾನ ಎಷ್ಟು ,

ಆ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ತಾಲ್ಲೂಕು ಹಾಗೂ ಕೊಳ್ಳೇಗಾಲಕ್ಕೆ ಬಿಡುಗಡೆಯಾಗಿರುವ ಅನುದಾನ ಎಷ್ಟು ,

ಇ) ಮುಕ್ತಾಯಗೊಂಡ ಕಾಮಗಾರಿಗಳಿಗೆ ಬಿಡುಗಡೆ ಮಾಡಬೇಕಾಗಿರುವ ಅನುದಾನ ಎಷ್ಟು ,